ಅವನೊಬ್ಬ ಸನ್ಯಾಸಿ, ಅವನಿಗೆ ತಿಳಿವಳಿಕೆ ಬಂದಾಗಿನಿಂದಲೂ ಜನರು ಅವನನ್ನು ಸನ್ಯಾಸಿಯೆಂದೇ ಕರೆಯೋದು. ಅವನು ಹುಟ್ಟಿದಾಗ ಒಬ್ಬ ಪಂಡಿತರು ಭವಿಷ್ಯ ನುಡಿದಿದ್ದರಂತೆ, ಮುಂದೆ ಈತ ಸಂಸಾರಿಯಾಗಿ ಲೌಕಿಕ ಸುಖದಲ್ಲಿ ಜೀವಿಸುತ್ತಾನೆಂದು. ಆದರೆ ಅವನ ತಂದೆಗೆ ತನ್ನ ಮಗ ಸಂಸಾರದ ಶೂಲದಲ್ಲಿ ಬೀಳುವುದು ಇಷ್ಟವಿರಲಿಲ್ಲ, ಮಿಥ್ಯ ಬದುಕಿನ ಯಾವೊಂದು ನೆರಳೂ ಅವನ ಮೇಲೆ ಬೀಳದ ಹಾಗೆ ದುಃಖ ಸಂಸಾರದಿಂದ ದೂರವಿಟ್ಟು ಸ್ಮಶಾನದಲ್ಲಿ ಅವನನ್ನು ಬೆಳೆಸಿದ್ದ.

ಅದೊಂದು ವೃದ್ಧಾಶ್ರಮದ ಮುಂದಿರುವ ಒರಟಾದ ಸ್ಮಶಾನ. ನಿತ್ಯವೂ ಅವನು ವಯೋಸಹಜ ಕಾಯಿಲೆಯಿಂದ ಬಳಲುವ ರೋಗಿಗಳನ್ನು, ಶವ ಹೊತ್ತು ರೋಧಿಸುತ್ತಾ ಬರುವ ಜನರನ್ನು ಕಂಡು ಜೀವನದ ಬಗ್ಗೆ ನಿರ್ಲಿಪ್ತನಾಗಿದ್ದ. ಅದು ಅವನು ಕಂಡುಕೊಂಡ ಬದುಕಿನ ಸತ್ಯ. ಅವನ ಪ್ರಕಾರ ಜೀವನವೇ ಇಷ್ಟು– ದುಃಖ ಸಾಗರ. ನಿತ್ಯ ಹಗಲು ರಾತ್ರಿ ಅವನು ಒಂದು ಮರದ ಕೆಳಗೆ ಧ್ಯಾನಸ್ಥನಾಗಿಯೇ ಕೂತಿರುತ್ತಾನೆ. ಶವಗಳನ್ನು ಹೊತ್ತು ಬರುವ ಜನರಿಗೆ ಸಾವಿನ ಅನಿವಾರ್ಯತೆ ಕುರಿತು ಉಪದೇಶ ನೀಡುತ್ತಾನೆ. ಅದರ ಬದಲಾಗಿ ಜನರು ನೀಡುವ ಭಿಕ್ಷೆಯೇ ಅವನ ಹೊಟ್ಟೆಪಾಡು.

ಹೀಗಿರುವಾಗ ಅವನಿಗೆ ಹೊರ ಜಗತ್ತಿನ ಸಂಪರ್ಕವಿರುವ ಒಬ್ಬನ ಸ್ನೇಹವಾಯಿತು. ಒಂದು ದಿನ ಆತ ಈ ಸನ್ಯಾಸಿಯನ್ನು ಕರೆದುಕೊಂಡು ನಗರದ ಕಡೆಗೆ ನಡೆದ. ಅಂದಿನವರೆಗೂ ಸನ್ಯಾಸಿ ತನ್ನ ಸ್ಮಶಾನದ ಬಿಡಾರ ಬಿಟ್ಟು ಹೊರಗೆ ಕಾಲಿಟ್ಟಿದ್ದಿಲ್ಲ.

ಹಾಗೆ ದಾರಿಯಲ್ಲಿ ನಡೆಯುವಾಗ ಅವರಿಗೆ ನಾಲ್ಕು ಜನ ವೃದ್ಧರು ಗಟ್ಟಿಯಾಗಿ ನಗುತ್ತಾ ಜೋರಾಗಿ ಕೈ ಬೀಸುತ್ತಾ ವಾಯುವಿಹಾರ ಮಾಡುತ್ತಿರುವುದು ಕಂಡಿತು. ಆ ಸನ್ಯಾಸಿಯು ಅವನ ಸ್ನೇಹಿತನಿಗೆ ಕೇಳಿದ:

"ಗೆಳೆಯ, ಅವರೆಲ್ಲಾ ಯಾರು? ವೃದ್ಧರಂತೆ ಕಂಡರೂ ಇಷ್ಟು ಪ್ರಸನ್ನರಾಗಿದ್ದಾರಲ್ಲ?"

"ಹೌದು, ಅವರು ವೃದ್ಧರೇ, ಬದುಕಿನ ಅಂಚಿನಲ್ಲಿರುವವರು; ಎಲ್ಲ ವೃದ್ಧರಂತೆ ಅವರಿಗೂ ವಯೋಸಹಜ ಕಾಯಿಲೆಗಳಿವೆ. ಇವತ್ತೋ ನಾಳೆಯೋ ಅವರು ಸಾಯುತ್ತಾರೆ. ಆದರೂ ಬದುಕಬೇಕೆಂಬ ಆಶಾಭಾವ ಅವರ ಸುಖವನ್ನು ಇಮ್ಮಡಿಗೊಳಿಸಿದೆ. ಅವರು ಯಾರೂ ಸಾವಿನ ನಿರೀಕ್ಷೆಯಲ್ಲಿ ಬದುಕನ್ನು ಪ್ರೀತಿಸುವುದನ್ನು ಬಿಟ್ಟವರಲ್ಲ."

ಸನ್ಯಾಸಿಗೆ ಆಶ್ಚರ್ಯ, ಅಂದಿನವರೆಗೂ ಆತ ತನ್ನ ಸ್ಮಶಾನದ ಎದುರಿಗಿನ ವೃದ್ಧಾಶ್ರಮ, ಅಲ್ಲಿ ನರಳುವ ಹಾಗೂ ಸಾವಿಗೆ ಕಾದು ಕುಳಿತ ವೃದ್ಧರನ್ನಷ್ಟೆ ಗಮನಿಸಿದ್ದ.

ಮುಂದೆ ಸಾಗಿದಾಗ ಅವರಿಬ್ಬರಿಗೆ ಹೆಗಲ ಮೇಲೆ ಹಾರೆ, ಸಲಿಕೆ, ಪಿಕಾಸು ಹೊತ್ತು ನಡೆಯುವ ಜನರ ಗುಂಪೊಂದು ಕಂಡಿತು.

ಸನ್ಯಾಸಿ, "ಗೆಳೆಯ, ಅವರೆಲ್ಲ ಎಲ್ಲಿ ಹೋಗುತ್ತಿದ್ದಾರೆ?"

"ಅವರು ದುಡಿಮೆಯ ವರ್ಗದ ಜನ. ದುಡಿಯುವುದಕ್ಕಾಗಿ ಹೊರಟಿದ್ದಾರೆ. ಅವರು ಭಿಕ್ಷಾನ್ನಕ್ಕಾಗಿ ಇನ್ನೊಬ್ಬರ ಬಳಿ ಕೈಯೊಡ್ಡುವುದಿಲ್ಲ. ಅವರು ಸ್ವಾವಲಂಬಿಗಳು, ಶ್ರಮ ಜೀವಿಗಳು. ಕುಳಿತು ಉಪದೇಶ ಕೇಳಲು ಅವರಿಗೆ ಸಮಯವಿರುವುದಿಲ್ಲ. ಅವರು ಕಾಲ್ಪನಿಕತೆಗಿಂತ ಕಣ್ಮುಂದೆ ಇರುವುದನ್ನೆ ನಂಬುವವರು. ಅವರಿಗೆ ಯಾವ ಲೋಕವನ್ನೂ ಉದ್ಧರಿಸುವ ಚಿಂತೆಯಿಲ್ಲ. ಅವರ ಬೆವರ ವಾಸನೆಗೆ ಯಾವ ರೋಗವೂ ಅವರ ಹತ್ತಿರ ಸುಳಿಯುವುದಿಲ್ಲ.''